ಮಂಟಪ ಮಾಲೆ - ೨೫೭

ಮಲೆಯಮಾದಯ್ಯನ ಸಾಂಸ್ಕೃತಿಕ ಚರಿತ್ರೆ

ಮಹಾದೇವ ಶಂಕನಪುರ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಗ್ರಂಥ ಪ್ರತಿ.

ಮಲೆಯಮಾದಯ್ಯನ ಸಾಂಸ್ಕೃತಿಕ ಚರಿತ್ರೆ

ಮಹಾದೇವ ಶಂಕನಪುರ

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

MALEYAMADAYYANA
SAMSKRUTIKA CHARITRE

by

Mahadeva Shankanapura
Head, Dept. of History
Sri Mahadeshwara Govt First Grade College
Kollegala, Chamarajanagara Dist.

Published by
Dr. Manjunatha Bevinakatti
Director, Prasaranga
Kannada University, Hampi
Vidyaranya 583 276

First Impression : 2011

Pages : iv + 28 **Price : Rs. 20/-**

www.kannadauniversity.org

© ಕನ್ನಡ ವಿಶ್ವವಿದ್ಯಾಲಯ, ಹಂಪಿ

ಬೆಲೆ ರೂ : ೨೦/-

ಪುಸ್ತಕ ದೊರೆಯುವ ಸ್ಥಳ
ಸರಸ್ವತಿ ಪುಸ್ತಕ ಮಾರಾಟ ಮಳಿಗೆ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಕನ್ನಡ ವಿಶ್ವವಿದ್ಯಾಲಯ ಪ್ರಾದೇಶಿಕ ಕಚೇರಿ
ನಂ. ೧, ಕಾನೂನು ಕಾಲೇಜಿನ ಹಳೆಯ ಕಟ್ಟಡ
ಮೈಸೂರು ಬ್ಯಾಂಕ್ ವೃತ್ತ, ಅರಮನೆ ರಸ್ತೆ
ಬೆಂಗಳೂರು ೫೬೦ ೦೦೯

ದೂರವಾಣಿ : ೦೮೦ - ೨೨೩೭೨೩೮೮

ಮುದ್ರಣ
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್, ಗದಗ

ಶಬ್ದಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವ ಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ-ಕನ್ನಡಿಗ-ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ, ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ, ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕ ಗೊಳ್ಳುವುದು ಅನಿವಾರ್ಯವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ

ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುರುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆ ಯನ್ನು ಶೋಧಿಸಲು ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆ ಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಹತ್ತಾರು ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಕುರಿತು ಸಾಮಾನ್ಯ ಓದುಗರಿಗೆ ಅರಿವನ್ನು ನೀಡಲು ಮಂಟಪಮಾಲೆಯಲ್ಲಿ ಕಿರುಪುಸ್ತಕಗಳನ್ನು ಪ್ರಕಟಿಸುತ್ತಿದೆ. 'ಮಲೆಯಮಾದಯ್ಯನ ಸಾಂಸ್ಕೃತಿಕ ಚರಿತ್ರೆ' ಎಂಬ ಕಿರುಹೊತ್ತಿಗೆಯನ್ನು ಈ ಮಾಲೆಗಾಗಿ ಬರೆದುಕೊಟ್ಟಿರುವ ಶ್ರೀ ಮಹಾದೇವ ಶಂಕನಪುರ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ. ಮಂಜುನಾಥ ಬೇವಿನಕಟ್ಟಿ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ. ಸುಜ್ಞಾನ ಮೂರ್ತಿ ಅವರಿಗೆ ಅಭಿನಂದನೆಗಳು.

ಡಾ. ಎ. ಮುರಿಗೆಪ್ಪ
ಕುಲಪತಿ

ಮಲೆಯ ಮಾದಯ್ಯನ ಸಾಂಸ್ಕೃತಿಕ ಚರಿತ್ರೆ

ಬರೆಯಬೇಕಾದ ಚರಿತ್ರೆ

ಒಂದು ಸಲ ಹೀಗೆ ಏಳುಮಲೆ ಕಾಡುದಾರಿಯಲಿ ಹೋಗತ ಇರಬೇಕಾದರೆ ಒಂದು ಹುಲಿಗೂ ಒಬ್ಬ ಮನುಷ್ಯನಿಗೂ ಮಾತಿಗೆ ಮಾತು ಬೆಳೆಯಿತು. ಹುಲಿ ನಾನೆ ಹೆಚ್ಚು ಅಂತ. ಮನುಷ್ಯ ನಾನೆ ಹೆಚ್ಚು ಅಂತ. ಹುಲಿ ಹೇಳಿತು ನಾನು ಒಂದುಸಲ ಕಣ್ಣು ಕೆಕ್ಕರಿಸಿ ಘರ್ಜಿಸಿದರೆ ಸಾಕು ನೀನು ನಡುಗಿ ಹೋಗುತೀಯ. ಮನಸ್ಸು ಮಾಡಿದರೆ ನಿನ್ನನ್ನು ಸಿಗಿದು ತಿಂದು ಬಿಡಬಲ್ಲೆ. ಆದ್ದರಿಂದ ನಾನೇ ಹೆಚ್ಚು ಎಂದಿತು. ಮನುಷ್ಯ ಹೇಳಿದ ನೀನು ಎಷ್ಟೇ ಕ್ರೂರಿಯಾದರೂ ನಿನ್ನನ್ನು ಹಿಡಿದು ಪಳಗಿಸಿ ಹೇಗೆ ಬೇಕಾದರೂ ಆಟ ಆಡಿಸುವ ಜಾಣತನ ನನಗಿದೆ. ನಾನೇ ಹೆಚ್ಚು ಎಂದ.

ಹೀಗೆ ವಾದ ಪ್ರತಿವಾದ ಮಾಡುತ್ತಾ ಹೋಗಬೇಕಾದರೆ ದಾರಿಯಲ್ಲಿ ಮಲೆ ಮಾದಯ್ಯ ಹುಲಿ ಮೇಲೆ ಕುಳಿತ ಒಂದು ಚಿತ್ರಪಟ ಕಾಣಿಸಿತು. ಆಗ ಅದನ್ನು ಹುಲಿಗೆ ತೋರಿಸಿ ಮನುಷ್ಯ ಹೇಳಿದ ನೋಡು ನಿನ್ನ ಮೇಲೆ ನಾನು ಕುಳಿತಿದ್ದೇನೆ. ಈಗ ಯಾರು ಹೆಚ್ಚು ನೀನೇ ಹೇಳು ಎಂದ. ಹುಲಿ ಆ ಚಿತ್ರಪಟವನ್ನು ದಿಟ್ಟಿಸಿ ನೋಡಿತು. ಚಿತ್ರಪಟದ ಕೆಳಗೆ ಬಲಗಡೆ ಅದನ್ನು ಬರೆದವನ ಹೆಸರಿತ್ತು. ಆಗ ಹುಲಿ ಮನುಷ್ಯನಿಗೆ ಹೇಳಿತು. ಇದು ಮನುಷ್ಯ ಬರೆದ ಚಿತ್ರಪಟ. ಆದ್ದರಿಂದ ಹುಲಿಯ ಮೇಲೆ ಮನುಷ್ಯ ಕುಳಿತಿದ್ದಾನೆ. ಇದನ್ನು ಒಂದು ಹುಲಿ ಬರೆದಿದ್ದರೆ ಮನುಷ್ಯನ ಮೇಲೆ ಹುಲಿ ಕುಳಿತಿರುತ್ತಿತ್ತು ಎಂದು ಹೇಳಿತು.

ಇತಿಹಾಸ ಬರೆದವನದಾಗಿರುತ್ತದೆ. ಇತಿಹಾಸ ವಂಚಿತರು ಹುಲಿಯ ಹಾಗೆ ತಳದಲ್ಲಿರುತ್ತಾರೆ. ತಳದಲ್ಲಿರುವವರ ಚರಿತ್ರೆಯನ್ನು ತಳದವರು ಬರೆಯಬೇಕು. ಹುಲಿ ಮತ್ತು ಮಾದಯ್ಯ ಇಲ್ಲಿ ಚರಿತ್ರೆಯ ಎರಡು ಮುಖಗಳು. ಆದರೆ ಅವು ಒಂದೇ ಪ್ರತಿಮೆ.

ಮಾದಯ್ಯ ಮಾಕಾವ್ಯ

ಮಲೆಯ ಮಾದಯ್ಯ ಕರ್ನಾಟಕ ಜನಪದ ಮಹಾಕಾವ್ಯವಾದ 'ಮಲೆಮಾದೇಶ್ವರ ಕಾವ್ಯ' ಮತ್ತು ಪರಂಪರೆಯ ನಾಯಕ. ಹಾಗೆ ಕರ್ನಾಟಕ ಜನಪದ ಕಲೆಗಳಲ್ಲೊಂದಾದ ಕಂಸಾಳೆ ಕಲೆಯ ಕರ್ತೃ ಮತ್ತು ಮಲೆಮಾದೇಶ್ವರ ಪಂಥ ಅಥವಾ ಕಂಸಾಳೆ ದೇವರ ಗುಡ್ಡರ ಪಂಥದ ದೈವ. ಮಲೆಮಾದಯ್ಯನ ಮಹಾಕಾವ್ಯ ನಮ್ಮ ದೇಶದ ಮಹಾಕಾವ್ಯಗಳಷ್ಟೆ ಮುಖ್ಯವಾದದ್ದು. ಫಿನ್‌ಲ್ಯಾಂಡಿನ 'ಕಲೇವಾಲ' ವಿಶ್ವದ ಮೊದಲ ಸುದೀರ್ಘ ಜನಪದ ಕಾವ್ಯ ಎನಿಸಿದ್ದು, ಇದು ೨೨,೭೯೫ ಸಾಲುಗಳಿಂದ ಕೂಡಿದೆ. ಕನ್ನಡದ ಮಲೆಮಾದೇಶ್ವರ ಜನಪದ ಮಹಾಕಾವ್ಯ

೩೨,೦೦೦ಕ್ಕೂ ಹೆಚ್ಚು ಸಾಲುಗಳ ಸುದೀರ್ಘ ಕಾವ್ಯವಾಗಿದೆ. ಇದು ಭಾರತ ಹಾಗೂ ವಿಶ್ವದ ಜನಪದ ಮಹಾಕಾವ್ಯಗಳಿಗೆ ಸ್ಪರ್ಧಿಯಾಗಿ ನಿಲ್ಲಬಲ್ಲ ಕಾವ್ಯ. ಇದು ಹಾದಿಯೊಳಗಲ ಕಾವ್ಯ, ಬೀದಿಯೊಳಗಲ ಕಾವ್ಯ. ತಿಪ್ಪೆ ಮೇಗಲ ಕಾವ್ಯ. ಕುಲೇಳು ಹದಿನೆಂಟು ಜಾತಿ, ಮತಗಳನ್ನು ಒಂದು ಮಾಡುವ ಕಾವ್ಯ. ಹೊಟ್ಟೆಪಾಡಿಗೆ ಕಾವ್ಯ ಹಾಡುವುದನ್ನೇ ವೃತ್ತಿ ಮಾಡಿಕೊಂಡ ಕತ್ತಲರಾಜ್ಯದ ಅನಕ್ಷರಸ್ಥರಿಂದ ಇದು ಇಂದಿಗೂ ಉಳಿದುಬಂದಿದೆ. ಬೆಳೆದುಬಂದಿದೆ.

ಮಲೆಮಾದಯ್ಯ ಕನ್ನಡ ನೆಲದಲ್ಲಿ ತನ್ನದೇ ಸಂಸ್ಕೃತಿ, ಪಂಥ ಒಂದರ ಹುಟ್ಟಿಗೆ ಕಾರಣನಾಗಿದ್ದಾನೆ. ಇದು ವೀರಶೈವವಲ್ಲದ ಅವೈದಿಕ ದ್ರಾವಿಡ ಶೈವ ಪರಂಪರೆಯ ದೇವರ ಗುಡ್ಡರ ಪಂಥವಾಗಿದೆ. 'ಮಲೆಯ ಮಾದಯ್ಯ' ಎಂಬುದೇ ಒಂದು ಆದಿಮ ಪರಿಕಲ್ಪನೆ. ಅವನಿಗೆ ಅಷ್ಟೊಂದು ಪ್ರಾಚೀನತೆ ಇಲ್ಲದಿದ್ದರೂ ಅಂತಹದೊಂದು ಹಿನ್ನೆಲೆಯ ಪಂಥವನ್ನು ಮುಂದು ವರೆಸಿದವನಾಗಿದ್ದಾನೆ. ೧೨ನೇ ಶತಮಾನದ ವಚನ ಚಳುವಳಿಯು ಸ್ಥಾವರಗೊಂಡ ನಂತರದಲ್ಲಿ ಮಾನವತೆ, ಸಮಾನತೆ ನೆಲೆಯಲ್ಲಿ ಜಾತ್ಯಾತೀತ, ಧರ್ಮಾತೀತವಾಗಿ ಕಾಣಿಸಿಕೊಂಡವ ಮಲೆಯ ಮಾದಯ್ಯ. ಈತ ಬುದ್ಧ, ಅಲ್ಲಮ, ಗೋರಖ, ಮಚ್ಚೇಂದ್ರ, ಮಂಟೇಸ್ವಾಮಿ, ಮರ್ಧಾನೆಗಯಿಬ್‌ರಂತೆ ಸ್ವತಂತ್ರ್ಯ ಐಡೆಂಟಿಟಿಯನ್ನು ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಚರಿತ್ರೆಯಲ್ಲಿ ಉಳ್ಳವನಾಗಿದ್ದಾನೆ. ಹಾಗೆ ತನ್ನದೇ ಒಂದು ಪಂಥದ ಸ್ಥಾಪಕನಾಗಿದ್ದಾನೆ.

ಅತೀತನ ಕಾಲವ ಹುಡುಕುತ

ಮಲೆಯ ಮಾದಯ್ಯ ಒಬ್ಬ ಐತಿಹಾಸಿಕ ವ್ಯಕ್ತಿ. ಅವನು ಮೈಸೂರು ಸೀಮೆಯ ಕತ್ತಲ ರಾಜ್ಯದ ಏಳು ಮಲೆಯೊಳಗೆ ನೆಲೆಸಿದ ಬಹುಸಂಖ್ಯಾತರ ದೈವ. ಈ ಮಾದಯ್ಯ ಯಾರು? ಯಾವ ಪ್ರದೇಶದವನು? ಇವನ ಜನನ, ಕುಲಮೂಲ, ಸ್ಥಳಮೂಲ, ಇವನ ಅಂತ್ಯ ಮೊದಲಾದ ವಿಷಯಗಳು ಸ್ಪಷ್ಟತೆ ಇಲ್ಲದಿದ್ದರೂ ಒಂದಿಷ್ಟು ಆಧಾರಗಳು ಆ ಬಗ್ಗೆ ಬೆಳಕು ಚಲ್ಲುತ್ತವೆ.

ಮಾದಯ್ಯನ ಕುರಿತಾದ ಹಳೆಯ ದಾಖಲೆ ಎಂದರೆ ಚಾಮರಾಜ ನಗರ ತಾ. ಹರದನ ಹಳ್ಳಿಯ ಕ್ರಿ.ಶ. ೧೩೨ಳರ ಹೊಯ್ಸಳ ವೀರಬಲ್ಲಾಳನ ಕಾಲದ ತಾಮ್ರ ಶಾಸನ. ಇದು ಮಾದಯ್ಯ ಶ್ರವಣನನ್ನು ಸಂಹರಿಸಿ, ಪ್ರಭುಲಿಂಗಾರಾಧ್ಯರಿಂದ ಲಿಂಗಾಧಾರಣೆ ಮಾಡಿಸಿಕೊಂಡು, ವಜ್ರಮಲೆಯಲ್ಲಿ ನೆಲೆಸಿ, ಆಲಂಬಾಡಿ ಜುಂಜೇಗೌಡನಿಂದ ದೇವಾಲಯ ಕಟ್ಟಿಸಿಕೊಂಡು, ಬೇಡರ ಕನ್ನಯ್ಯನಿಂದ ಪೂಜಿಸಿಕೊಂಡು, ಅವರಿಗೆ ಕಾಣಿಕೆ ಪಡೆಯುವ ಹಕ್ಕನ್ನು ನೀಡಿದ್ದಾಗಿ ಹೇಳುತ್ತದೆ.

ಕ್ರಿ.ಶ. ೧೭೭೬ರ ಹೈದರಾಲಿಯ ತಾಮ್ರಶಾಸನ ಮೇಲಿನ ಶಾಸನದ ಮಾಹಿತಿಗಳನ್ನೇ ಪುನರುಚ್ಚರಿಸುತ್ತಾ ಸರಗೂರ ಉಪ್ಪಲಿಗರನ್ನು ಎಣ್ಣೆಮಜ್ಜನಕ್ಕೆ ನೇಮಿಸಿಕೊಂಡ ಅಂಶವನ್ನು ಒಳಗೊಂಡಿದೆ.

ಮಲೆಮಾದಯ್ಯನ ಬೆಟ್ಟದ ತಪ್ಪಲಿನ ಊರಾದ ಮೀಣ್ಯದ ಗುರುಸಿದ್ಧ ಕವಿ ಕ್ರಿ.ಶ. ೧೭೫೦ರಲ್ಲಿ ಬರೆದ "ಶ್ರೀ ಮಾದೇಶ್ವರ ಸಾಂಗತ್ಯ" ಮಾದಯ್ಯ ಎಪ್ಪತ್ತೇಳುಮಲೆ ದಾಟಿ,

ಬೇಡಗಂಪಣ ರಾಜ್ಯ, ಆಲಂಬಾಡಿಗೆ ಬಂದು ಕಾರಯ್ಯನ ಒಕ್ಕಲು ಪಡೆದು ನಡುಮಲೆಯಲ್ಲಿ ನೆಲೆಸುತ್ತಾನೆ. ಕಂಪಣ ರಾಯಣ್ಣ ಬಿಲ್ಲಯ್ಯನಿಗೆ ಭೂಮಿ ನೀಡುತ್ತಾನೆ. ಕುಂತೂರು ಮಠದ ಸ್ವಾಮಿಗಳಿಂದ ಬಿಲ್ಲಯ್ಯನಿಗೆ ಲಿಂಗದೀಕ್ಷೆಯಾಗುತ್ತದೆ ಎಂಬುದಾಗಿ ವಿವರಿಸುತ್ತದೆ.

ಕ್ರಿ.ಶ. ೧೮೩೮ರ ಜೈನ ಕವಿ ಚಾಮರಾಜನಗರದ ಮಲೆಯೂರ ದೇವಚಂದ್ರನು ಬರೆದ 'ರಾಜಾವಳಿ ಕಥಾಸಾರ' ಕುಂತೂರು ಮಠದೊಳು ನಂಜಯ್ಯನೆಂಬ ಜೋಳಿಗೆ ಒಡೆಯರಿದ್ದಲ್ಲಿಗೆ ಮಲೆಮಾದಯ್ಯ ಬಂದನೆಂದು, ಅಲ್ಲಿ ಪವಾಡಗಳ ಮಾಡಿ ಏಳುಮಲೆಯಲ್ಲಿ ಶ್ರವಣನ ಸಂಹರಿಸಿ 'ಮಾದ'ನಾಗಿದ್ದವನು ಮಾದೇಶ್ವರನಾಗಿ ವಿವಿಧ ರೀತಿಯಲ್ಲಿ ಪೂಜಿತನಾದನೆಂದು ಉಲ್ಲೇಖಿಸುತ್ತಾನೆ.

ಕ್ರಿ.ಶ. ೧೯೩೩ರಲ್ಲಿ ಸಂಗಪ್ಪಶಾಸ್ತ್ರಿ ಬರೆದ 'ಸುತ್ತೂರು ಸಿಂಹಾಸನದ ಗುರು ಪರಂಪರೆ' ಕೃತಿಯಲ್ಲಿ ಸುತ್ತೂರು ಶಿವಾಚಾರ್ಯರ ಮಹಿಮೆ ಕೇಳಿದ ಕಲ್ಯಾಣದ ಕೆಲವು ಶರಣರು ಶ್ರೀಶೈಲದ ಬಳಿಬಂದು ದಾರಿ ಕೇಳಿದರು. ಶಿವನಂಶವಾದ ಮಾದೇಶ್ವರ ಬಾಲಕನಾಗಿ ಅವರನ್ನು ಸುತ್ತೂರಿಗೆ ಕರೆತಂದ. ಆಗ ಸುತ್ತೂರು ಮಠದ ಪೀಠಾಧಿಪತಿಗಳಾಗಿದ್ದ ಸಿದ್ಧನಂಜ ದೇಶಿಕರು ಅವನನ್ನು ರಾಗಿ ಬೀಸುವ ಕೆಲಸಕ್ಕೆ ನೇಮಿಸಿದರು. ಅಲ್ಲಿ ಹಲವು ಪವಾಡಗಳನ್ನು ಮೆರೆದ. ಹಾವು ಕಚ್ಚಿ ಸತ್ತ ಯಾತ್ರಿಕನನ್ನು ಬದುಕಿಸಿದ. ಎಳೆಯಲಾಗದ ರಥವ ಎಳೆವಂತೆ ಮಾಡಿದ. ದನಗಳ ಸಂಕ್ರಾಮಿಕ ರೋಗ ನಿವಾರಿಸಿದ. ಆಗ ಸಿದ್ಧನಂಜ ದೇಶಿಕರಿಗೆ ಮಾದೇಶ್ವರ ಪರಶಿವರೂಪಿ ಎನಿಸಿದ. ಅಷ್ಟಕ್ಕೆ ಅವನು ಮಠ ಬಿಟ್ಟು ಹೊರಟು ಹೋಗಿದ್ದ ಎಂಬ ಮಾಹಿತಿಗಳಿವೆ.

ಈ ಕೆಲವು ಮಾಹಿತಿಗಳನ್ನಿಟ್ಟುಕೊಂಡು ಅವನ ಕಾಲವನ್ನು ಪರಿಶೀಲಿಸಬಹುದು. ಕ್ರಿ.ಶ. ೧೩೨೪ರ ಹರದನಹಳ್ಳಿ ಶಾಸನ ಮಾದೇಶ್ವರ ಕಾವ್ಯದ ಪ್ರಸಂಗಗಳನ್ನೇ ಉಲ್ಲೇಖಿಸುತ್ತದಾದರೂ ಕ್ರಿ.ಶ. ೧೧೭೦-೧೨೪೯ರ ಅವಧಿಯ ಸಿದ್ಧನಂಜ ದೇಶಿಕರ ಕಾಲಕ್ಕೆ ಮಾದಯ್ಯನ ಕಾಲವನ್ನು ಲಗತ್ತಿಸುವುದು ಅಸಂಭವನೀಯ ಎನ್ನಲಾಗಿದೆ.

"ದೇವಚಂದ್ರನು ತನ್ನ ದಾಖಲೆಯ ಸರಣಿಯಲ್ಲಿ ಮಾದೇಶ್ವರನ ವಿಷಯವನ್ನು ವಿಜಯನಗರ ಸಾಮ್ರಾಜ್ಯ ಕ್ಷೀಣಿಸುತ್ತಿದ್ದ ಕಾಲಕ್ಕೆ ಸೇರಿಸಿದ್ದಾನೆ. ಬಹುಶಃ ಅವನ ದೃಷ್ಟಿಯಲ್ಲೂ ಮಾದೇಶ್ವರನ ಕಾಲ ೧೫-೧೬ನೇ ಶತಮಾನದ ಅಂತರವೇ ಇರಬೇಕು."[೧೧]

"ಮಾದೇಶ್ವರ ಸುತ್ತೂರು ಮಠಕ್ಕೆ ಬಂದಿದ್ದನೆಂಬ ಹೇಳಿಕೆಗಿಂತಲೂ ಖಚಿತವಾಗಿ ಕುಂತೂರು ಮಠಕ್ಕೆ ಬಂದಿದ್ದನೆಂಬುದು ಹೈದರಾಲಿಯ ಶಾಸನ ಹಾಗೂ ಜನಪದ ಸಾಹಿತ್ಯಗಳಿಂದ ತಿಳಿದುಬರುವುದರಿಂದ ಕುಂತೂರು ಮಠದ ಪ್ರಾಚೀನತೆ ಕ್ರಿ.ಶ. ೧೫೧೨ ಎಂದು ಕುಂತೂರು ಶಾಸನದಿಂದ ತಿಳಿದು ಬರುವುದರಿಂದ ಮಾದೇಶ್ವರನ ಕಾಲ ನಿರ್ವಿವಾದವಾಗಿ ೧೬ನೇ ಶತಮಾನವೆಂದು ಒಪ್ಪಬೇಕಾಗುತ್ತದೆ."[೧೨]

ಚಾರಿತ್ರಿಕ ವ್ಯಕ್ತಿ ಮತ್ತು ಜನಪದ ದೈವ. ಸಾಂಸ್ಕೃತಿಕವಾಗಿ ಮಾದಯ್ಯ ಶಿವನ ಪ್ರತಿನಿಧಿ ಮತ್ತು ಮುಂದುವರಿಕೆ. ಕಾವ್ಯದಲ್ಲಿ ಕೂಡ ಶಿವನೇ ಮಾದಯ್ಯನಾಗಿ ಅವತರಿಸುವಂತೆ ಬಿಂಬಿಸಲಾಗುತ್ತದೆ. ಅಥವಾ ಮಾದಯ್ಯನೆಂದರೆ ಶಿವನಲ್ಲದೆ ಬೇರೆಯಲ್ಲ ಎಂದು ನಂಬಲಾಗಿದೆ. ಹಾಗಾಗಿ ಈತ ಆದಿಮ ಆವೈದಿಕ ಶೈವ. ಅವನು ೧೫-೧೬ನೇ ಶತಮಾನದ ಶೈವ ಸಿದ್ಧನಾದರೂ ಆದಿಮ ಲಕ್ಷಣಗಳನ್ನೇ ಹೊಂದಿದ್ದಾನೆ. ಹುಲಿಯ ಮೇಲಿನ ಸವಾರಿ, ಹುತ್ತದ ವಾಸ, ನಾಗಾಭರಣ, ನಾಗಮಲೆವಾಸ, ಆನೆಯನ್ನೇ ತಲೆದಿಂಬಾಗಿಸುವುದು, ಎಪ್ಪತ್ತೇಳು ಮಲೆಗಳ ಮಾದೇವನಾಗುವುದು, ಬೇಡ ಕಂಪಣ ಭಕ್ತರಿಂದ ಪೂಜೆಗೊಳ್ಳುವುದು, ಸೋಲಿಗ ಶಿಷ್ಟರ ಪಡೆಯುವುದು, ಬುಡಕಟ್ಟು ಆಹಾರದ ಎಡೆ ಇಕ್ಕಿಸಿಕೊಳ್ಳುವುದು ಹೀಗೆ. ಇಂತಹ ಮಾದಯ್ಯ ೧೫- ೧೬ನೇ ಶತಮಾನ ಅವಧಿಯಲ್ಲಿದ್ದ ಕತ್ತಲರಾಜ್ಯದೊಳಗಿನ ಸಮಕಾಲೀನ ಪಂಥಗಳ ಜೊತೆ ಮುಖಾ ಮುಖಿಯಾಗುತ್ತಾನೆ. ಆದಿಶೈವವನ್ನು ಪ್ರತಿಪಾದಿಸುತ್ತಾ ತನಗೆ ಒಗ್ಗಿದವರನ್ನು ಒಳಗೊಳ್ಳುತ್ತಾ, ಒಗ್ಗಿಕೊಳ್ಳದವರನ್ನು ಪಕ್ಕಕ್ಕೆ ಸರಿಸಿ ಮೆಟ್ಟಿ ನಾಡಿನಿಂದ, ಕಾಡಿನೆಡೆಗೆ ಸಾಗುತ್ತಾನೆ.

ಮಾದಯ್ಯ ನಾಡು ಬಿಡುವ ಮೊದಲೇ ಎನ್‌ಲೈಟನ್ಡ್ ಮಾದಯ್ಯನಾಗಿದ್ದ. ಆತ ಇದ್ಧಿಶಕ್ತಿ ಪಡೆದವನಾಗಿ, ಪವಾಡಗಳನ್ನು ಮೆರೆಯ ಬಲ್ಲವನಾಗಿದ್ದ. ಬದನವಾಳುಮಠ, ಕುಂತೂರುಮಠ, ಸುತ್ತೂರುಮಠಗಳ ಭೇಟಿಯ ಉದ್ದೇಶ ವೀರಶೈವ ಕಲ್ಪನೆಯ "ಲಿಂಗಧೀಕ್ಷೆ" ಪಡೆಯುವುದಾಗಿತ್ತು ಎಂಬುದು ಹಾಸ್ಯಾಸ್ಪದದಂತೆ ಕಾಣುತ್ತದೆ. ನಂತರವೂ, ಇಂದಿಗೂ ಆತ ಲಿಂಗಕ್ಕೆ ಬದಲು ಕೊರಳ ತುಂಬ ರುದ್ರಾಕ್ಷಿ ಧರಿಸುತ್ತಾನೆ. ಮಠಗಳ ಅವನ ಭೇಟಿ ಲಿಂಗದೀಕ್ಷೆಗೆ ಬದಲಾಗಿ ಅವರನ್ನು ಪರೀಕ್ಷೆಗ ಗುರಿಪಡಿಸುವುದು ಮತ್ತು ಅವರಿಗೆ ತಾನು ಏನೆಂಬುದನ್ನು ತೋರಿಸುವುದಾಗಿತ್ತು. ಅಂದಿನ ಸಾಮಾಜಿಕ ಸಂದರ್ಭಕ್ಕೆ ಅದು ಬೇಕಾಗಿತ್ತು. ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸಮಾನತೆ ಮತ್ತು ಶ್ರೇಷ್ಠತೆ ಯನ್ನು ಪಡೆದು ನಂತರ ನಿರಾಕರಿಸುವುದು ಮಾದಯ್ಯನ ನಡೆಗಳ ನಿಲುವಾಗಿ ಕಾಣುತ್ತದೆ. ಈತ ವೀರಶೈವದ ಆಚೆಗೆ ಶೈವ-ನಾಥ-ಸಿದ್ಧನಾಗಿ ನಿಂತು ಸಮಾನತೆ, ಸ್ವಾತಂತ್ರ್ಯ, ಬ್ರಾತೃತ್ವಕ್ಕಾಗಿ ಅವರನ್ನು ಕಾಡುತ್ತಾನೆ. ಮಂಟೇಸ್ವಾಮಿಯ ಕಲ್ಯಾಣ ಪಟ್ಟಣದ ಪ್ರವೇಶ ಕೂಡ ಇಂತದ್ದೆ. ಲಿಂಗವಂತ ಜಂಗಮ ರನ್ನು ಪರೀಕ್ಷಿಸುವುದು. ದ್ವಾರಪಾಲಕ ಲಿಂಗ ತೋರಿಸು ಎಂದಾಗಿ ಮಂಟೇಸ್ವಾಮಿ ತನ್ನ ಜಡೆಮುಡಿ ಯನ್ನ ಒದರಿ ರಾಶಿ-ರಾಶಿ ಲಿಂಗ ಸುರಿಸುತ್ತಾನೆ. ಇದು ಲಿಂಗ ನಿರಾಕಾರಿ ಬೋಳು ಜಂಗಮತನ. ಮಾದಯ್ಯನೂ ಅದೇ ಲಿಂಗಧಾರಣೆ ನಿರಾಕರಿಸಿದ ಜಂಗಮ.

ಬದನವಾಳು ಮಠದಲ್ಲಿ ಮಾದಯ್ಯ ಬದನೆ ಸಸಿ ನೆಟ್ಟು ಬದನೆ ಬೆಳೆಯಬೇಕಾದ ಕಾಯಕಕ್ಕೆ ನೇಮಕವಾಗುತ್ತಾನೆ. ಸುತ್ತೂರು ಮಠದಲ್ಲಿ ರಾಗಿ ಬೀಸುವ ಕಾಯಕ ಮಾಡ ಬೇಕಾಗುತ್ತದೆ. ಕುಂತೂರು ಮಠದಲ್ಲಿ ಹೂವಿನ ಊಳಿಗಕ್ಕೆ ನೇಮಕವಾಗುತ್ತಾನೆ. ಈ ಎಲ್ಲಾ ಕೆಲಸಗಳನ್ನು ತಾನು ಕಲಿತಿದ್ದ ತಂತ್ರ ವಿದ್ಯೆ ಪವಾಡಗಳ ಮೂಲಕ ಮಾಡಿ ವೀರಶೈವ

ಬಿಳಿಗಿರಿರಂಗಸ್ವಾಮಿ, ಶ್ರವಣ, ದೇವಮ್ಮ, ಕಾಳಮ್ಮರ ನಡುವೆ ಏಳುಮಲೆ ರಾಜ್ಯದಲ್ಲಿ "ಮಾದಪ್ಪ", ಮಾದೇವ, ಮಾದೇಶ್ವರನಾಗುವುದು ಅತನ ಬೆಳವಣಿಗೆಯ ಸೂಚನೆಯೇ ಆಗಿದೆ.

"ತಲಕಾಡಿನ ವಿ. ಮಾದಯ್ಯ ಕ್ರಿ.ಶ. ೧೯೬೬ರಲ್ಲಿ ಬರೆದ "ಮಲೆಮಾದೇಶ್ವರ ಚರಿತ್ರೆ" ಎಂಬ ಕೃತಿಯಲ್ಲಿ ಕೆಲವು ಕುತೂಹಲಕಾರಿ ಸಂಗತಿಗಳಿವೆ. ಆ ಕೃತಿಯ ಪ್ರಕಾರ ಬೇವಿನ ಕಾಳಿ "ಕಟ್ಟೆಹಳ್ಳ" ಎಂಬ ಊರಿನಲ್ಲಿದ್ದ ವಿಮಲಬ್ಬೆ ಎಂಬ ಜೈನ ಯುವತಿ. ಶ್ರೀಮಂತಿಕೆಯಿಂದ ಮೆರೆಯುತ್ತಿದ್ದ ಅವಳು ಗಂಗರಸರ ಆಶ್ರಯದಲ್ಲಿ ನಾಟ್ಯ ಪ್ರವೀಣೆಯಾಗಿದ್ದಾಕೆಯ ಮಗಳು. ಇವರಿಗೆ ರಾಜ ಹಲವಾರು ಕಾಣಿಕೆಗಳನ್ನು ಕೊಟ್ಟಿದ್ದ ಎಂಬ ಉಲ್ಲೇಖವಿದೆ."[೧೦]

ಅದೇ ರೀತಿ ಆ ಕೃತಿಯಲ್ಲಿ ಶ್ರವಣನೆಂಬ ಜೈನ "ಕಂಬದಹಳ್ಳಿ" ಬೆಟ್ಟದಲ್ಲಿ ಕ್ರಿ.ಶ. ೧೩೨೦ರಲ್ಲಿದ್ದನೆಂದು ಹೇಳಲಾಗಿದೆ. ಇಲ್ಲಿ ಉಲ್ಲೇಖಗೊಳ್ಳುವ ಕಟ್ಟೆಹಳ್ಳ ಎಂಬುದು ಜೈನ ಯುವತಿಯ ಊರ ಹೆಸರಾಗಿದ್ದು, ಶ್ರವಣ ಇದ್ದನೆಂದು ಹೇಳುವ ಕಂಬದಹಳ್ಳಿ ಬೆಟ್ಟ ಎಂಬ ಬೆಟ್ಟದ ಹೆಸರುಗಳು ಒಂದೇ ಎಂಬುದು ಗಮನಾರ್ಹ. ಈ ಮಾಹಿತಿಗಳು ಮಾದಯ್ಯನಿಗಿಂತ ಮುಂಚೆ ಕತ್ತಲ ರಾಜ್ಯದ ಏಳುಮಲೆಯ ಪ್ರಾಂತ್ಯ ಜೈನ ಧರ್ಮದ ಪ್ರದೇಶವಾಗಿರಬಹುದು ಎಂಬುದನ್ನು ಸೂಚ್ಯವಾಗಿ ಹೇಳುತ್ತವೆ.

ಕ್ರಿ.ಶ. ೧೩೨೦ರಷ್ಟು ಹಳೆಯದಾದ ಅಥವಾ ಅದಕ್ಕಿಂತೂ ಹಿಂದಿನ ಅಥವಾ ಆನಂತರದ ಘಟನೆಗಳೂ ಸಹ ಕಾವ್ಯವಸ್ತುವಾಗಿ ಅದು ಐತಿಹ್ಯವೊ, ಪುರಾಣಗಳೊ ಆಗಿ ಸೇರಿರುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು.

ಹಾಲುಮತದ ನೆಲೆಯ ನರಸಿ

ಮಾದಯ್ಯ ನಡುಮಲೆಯಲ್ಲಿ ನೆಲೆನಿಂತ ಮೇಲೆ ತನಗೊಂದು ಗುಡಿ ಕಟ್ಟಿಸಿಕೊಳ್ಳಲು ಅಲಂಬಾಡಿಯ ಜುಂಜೇಗೌಡನನ್ನು ಮೊರೆ ಹೋಗುತ್ತಾನೆ. ಜುಂಜೇಗೌಡ ಹಾಲುಮತದವ. ಅಲಂಬಾಡಿಯ ದೊಡ್ಡಕುಳ ಮತ್ತು ಸಂಪತ್ತುಗಾರ. ಕಾವ್ಯದಲ್ಲಿ ಈತನ ಊರನ್ನು ಅಲಂಬಾಡಿ ರಾಜ್ಯವೆನ್ನಲಾಗುತ್ತದೆ. ಬಹುಶಃ ಇದು ೧೫-೧೬ನೇ ಶತಮಾನದ ವೇಳೆಗೆ ಏಳು ಮಲೆಗಳ ನಡುವಿನ ಪ್ರಮುಖ ಕುರುಬರ ತಾಣ. ಜುಂಜೇಗೌಡ, ಮಾದಯ್ಯನಿಗೆ ಗುಡಿ ಕಟ್ಟಿಸಿಕೊಡಲು ಮೊದಲಿಗೆ ಒಪ್ಪುವುದಿಲ್ಲ. ಆಗ ಮಾದಯ್ಯ ಅವನಿಗೆ ಕಷ್ಟ, ಕೊಟ್ಟು, ಪರೀಕ್ಷೆಗಳನ್ನು ಒಡ್ಡಿ, ತಾನೇ ಪರಿಹರಿಸಿ ಅವನ ಒಲಿಸಿಕೊಂಡು ಒಕ್ಕಲು ಪಡೆದು ಗುಡಿ ಕಟ್ಟಿಸಿಕೊಳ್ಳುತ್ತಾನೆ. ಇದು ಒಪ್ಪದ ಕುರುಬರ ಬೊಪ್ಪೇಗೌಡನನ್ನು ಒಪ್ಪಿಸಿ ಬೊಪ್ಪಗಣಪುರದಲ್ಲಿ ಮಠಮನೆ ಮಾಡಿಸಿಕೊಳ್ಳುವ ಮಂಟೇಸ್ವಾಮಿ ಕಾವ್ಯದ ಪ್ರಸಂಗದಂತೇ ಇದೆ. ಇದು ಕಾಕತಾಳೀಯ ವಾದರೂ ನಕಲಲ್ಲ.

ವಿಜಯನಗರ ಸಾಮ್ರಾಜ್ಯ ಹಾಗೂ ಮೈಸೂರು ಒಡೆಯರ ಕಾಲಕ್ಕೆ ಈ ಪ್ರಾಂತ್ಯದಲ್ಲಿ ಹಾಲುಮತದ ಕುರುಬರು, ಕಂಪಣರು ಪ್ರಾಬಲ್ಯವಿದ್ದ ಸೂಚನೆಗಳಿವು. ಬಹುಪಾಲು

ಶೈವಸಿದ್ಧ, ನಾಥಸಿದ್ಧರ ತಂಗುದಾಣಗಳು ಹಾಲುಮತದವರ ನೆಲೆಗಳೇ ಆಗಿದ್ದವು. ಮಂಟೇಸ್ವಾಮಿಗೆ ಮಠಮನೆಯಾಗುವುದು ಕುರುಬರ ಬೊಪ್ಪೇಗೌಡನ ತಾಣ. ಮಂಟೇಸ್ವಾಮಿಗಳ ಗುರು, ಗುರು ಬಾರ ಲಿಂಗಯ್ಯ, ಶಿಶು ಮಕ್ಕಳಾದ ಲಿಂಗಯ್ಯ ಚನ್ನಯ್ಯ ನೆಲೆಯಾದ ಕುರುಬನ ಕಟ್ಟೆ ಕೂಡ ಕುರುಬರ ತಾಣ. ಬಹುತೇಕ ಆದಿಮ ಶೈವ ಸಾಂಸ್ಕೃತಿಕ ನೆಲೆಗಳೆಲ್ಲವೂ ಕುರುಬರ ತಾಣಗಳೇ. ಇವು ಕಾಲಕ್ರಮೇಣ ಅಸ್ಪೃಶ್ಯ ಕುಲಗಳ ಸಿದ್ಧರ ನೆಲೆಗಳಾಗಿವೆ. ಕುರುಬರ ಕುಲದ ರೇವಣ ಸಿದ್ಧ, ಮಾದಿಗರ ಮರುಳಸಿದ್ಧನ ಗುರು ಎಂಬುದನ್ನು ಗಮನಿಸಬೇಕು. ಆಲಂಬಾಡಿ ಹಾಲಸಾಗರ ಎಂಬ ಭಾವಾರ್ಥ ಉಳ್ಳದ್ದಾಗಿದ್ದು ಆಲಂಬಾಡಿ ಬಸಪ್ಪನಿಗೂ ಮಾದಯ್ಯನಿಗೂ ಬಿಡಿಸಲಾಗದ ನಂಟಿದೆ. ಎಂಬ ನಂಬಿಕೆ ಇದೆ.

"ಮಾದೇಶ್ವರ ದೇವಾಲಯದ ಸುಕನಾಸಿ ಬಾಗಿಲ ಮೇಲಿನ ಶಾಸನ ೧೭ನೇ ಶತಮಾನದಲ್ಲಿ ರಚಿತವಾದುದು ಎಂದು ಹೇಳಲಾಗಿದೆ. ಇದರಲ್ಲಿ ಬೆಳಕವಾಡಿ ಹೊನ್ನ ಮಲಗಶೆಟ್ಟರ ಮಗ ಗುರುಬ ಶೆಟ್ಟಿ ಎಂಬಾತ ಯುವ ಸಂವತ್ಸರದ ಪುಷ್ಯ ಮಾಸ ಬಹುಳ ಬಿದಿಗೆಯಲ್ಲಿ ಕಲ್ಲುಗುಡಿಯ ಬಸದಿಯನ್ನು ಕಟ್ಟಿಸಿದ ಎಂಬ ಉಲ್ಲೇಖವಿದೆ."[೧೦] ಇದು ೧೭ನೇ ಶತಮಾನದಲ್ಲೇ ಕಟ್ಟಲ್ಪಟ್ಟ ಜೈನ ಬಸದಿ ಎಂದು ಸಿದ್ಧಿಯಾದರೆ ಆ ವೇಳೆಗೆ ಅದು ಮಾದಯ್ಯನ ಗುಡಿಯಾಗಿರಲಿಲ್ಲ. ಕಾಲ ಕ್ರಮೇಣ ಜೈನಬಸದಿ ಮಾದಯ್ಯನ ಕೇಂದ್ರವಾಗಿ ಪರಿವರ್ತನೆಯಾಗಿರಬೇಕು ಎಂಬ ಅಭಿಪ್ರಾಯವನ್ನು ಒಪ್ಪ ಬೇಕಾಗುತ್ತದೆ. ಅದರ ಜೊತೆಗೆ ಮಾದಯ್ಯನ ಐಕ್ಯ ಸ್ಥಳ ಇನ್ನಾವುದಿರಬಹುದೆಂಬ ಪ್ರಶ್ನೆ ಹುಟ್ಟುತ್ತದೆ.

"ಸರಗೂರ ಉಪ್ಪಲಿಗರು ಗುಡ್ಡರಾಗಿ ಆವೇಶ ಬಂದು ಏಳುಮಲೆ ಮಧ್ಯದಲ್ಲಿ ಪಶ್ಚಿಮಾಭಿ ಮುಖವಾಗಿ ಗುಡಿ ಕಟ್ಟಿಸಿ ಮಾದನಾದುದರಿಂದ ಮಾದೇಶ್ವರನೆಂದು ಹೆಸರಿಟ್ಟರು. ಈ ಮಾದೇಶ್ವರ ನನ್ನು ಅನೇಕ ರೀತಿಯಿಂದ ಪೂಜಿಸುತ್ತಾ ಬಂದು ಜಗತ್‌ಪ್ರಸಿದ್ಧಿಯಾಯಿತು. ಸರಗೂರ ಗುಡ್ಡನೇ ಅಲ್ಲಿದ್ದು ಜಾತ್ರೆ, ತೇರು, ತಿರುನಾಳಂದು ವರ್ಷಂಪ್ರತಿ ನಡೆಸುತ್ತಾ ಬಂದನು."[೧೧] ಎಂಬುದಾಗಿ ದೇವಚಂದ್ರ ತನ್ನ ರಾಜಾವಳಿ ಕಥಾಸಾರದಲ್ಲಿ ಬರೆಯುತ್ತಾನೆ.

ಮೇಲಿನ ಮಾಹಿತಿಗಳು ಮಾದಯ್ಯನಿಗೆ ಗುಡಿ ಕಟ್ಟಿಸಿದ ಬಗ್ಗೆ ವಿಭಿನ್ನ ಅಭಿಪ್ರಾಯಗಳನ್ನು ತಿಳಿಸುತ್ತವೆ. ಒಂದು ಬೆಳಕವಾಡಿಯ ಗುರುಬಶೆಟ್ಟಿ ಕಟ್ಟಿಸಿದನೆಂದರೆ, ಇನ್ನೊಂದು ಸರಗೂರ ಉಪ್ಪಲಿ ಗರು ಎನ್ನುತ್ತದೆ. ಈ ಉಲ್ಲೇಖಿತ ಬೆಳಕವಾಡಿ- ಸರಗೂರುಗಳು ಒಂದೇ ಪರಿಸರದಲ್ಲಿ ಅಕ್ಕಪಕ್ಕ ಬರುವ ಊರುಗಳು ಎಂಬುದನ್ನು ಹಾಗೂ ಗುರುಬಶೆಟ್ಟಿ ಮತ್ತು ಸರಗೂರವನು ಇಬ್ಬರೂ ಜಾತಿ ಯಲ್ಲಿ ಉಪ್ಪಾರ ಜಾತಿಯವರೇ ಎಂಬುದನ್ನು ಗಮನಿಸ ಬೇಕು. ಇವೆರಡು ಒಂದೇ ಜಾತಿಯ ಒಬ್ಬ ವ್ಯಕ್ತಿಯನ್ನೇ ಹೇಳುತ್ತಿರಬಹುದು. ಆದರೆ ಕಾವ್ಯ ಮತ್ತು ಪರಂಪರೆಗಳು ಮಾತ್ರ ಮಾದಯ್ಯನಿಗೆ ಗುಡಿ ಕಟ್ಟಿಸಿದವನು ಜುಂಜೇಗೌಡ ಎಂದು ಹೇಳುತ್ತವೆ. ಮಾದಯ್ಯನ ದೇವಸ್ಥಾನದ ಉತ್ತರಕ್ಕೆ ೧೨ ಮೈಲಿ ದೂರದಲ್ಲಿ ಈಗ

ಮಕ್ಕಳಾಗಿ ಕೊಡುತ್ತಾರೆ. ಇದೊಂದು ಸಂಸ್ಕೃತಿಗಳ ಸಂಕರ ರೂಪಕ. ಹುಟ್ಟು ಬಂಜೆ ಯಾಗಿದ್ದ ಸಂಕಮ್ಮ ಗಂಡನ ಒಂಭತ್ತು ತಿಂಗಳ ಹೆಚ್ಚೇನು ಬೇಟೆ ಅವಧಿಯಲ್ಲಿ ಗರ್ಭ ಧರಿಸುತ್ತಾಳೆ. ಗಂಡು ಮಕ್ಕಳಿಬ್ಬರ ಹಡೆದು ತಾಯಿಯಾಗುತ್ತಾಳೆ. ಸಕಲ ಸಂಪತ್ತನ್ನು ಪಡೆದಿರುತ್ತಾಳೆ. ನೀಲೇಗೌಡ ಬೇಟೆಯಾಡಿ ಫಲಸಂಗ್ರಹಿಸಿ ಹಿಂದಿರುಗುವ ಸಮಯಕ್ಕೆ ಸರಿಯಾಗಿ ಸಂಕಮ್ಮನ ಮಡಿಲಲ್ಲೂ ಮಕ್ಕಳ ಫಲವಿರುತ್ತದೆ. ಒಂಭತ್ತು ತಿಂಗಳ ಅವಧಿಯಲ್ಲಿ ನೀಲೇಗೌಡನ ನಿರ್ಗಮನದ ನಂತರ ಮಾದಯ್ಯನ ಆಗಮನವಾಗುತ್ತದೆ. ಮಾದಯ್ಯನಿಗೆ ಒಕ್ಕಲು ಮತ್ತು ಮಕ್ಕಳ ಭಿಕ್ಷೆ ಪಡೆಯಬೇಕಿರುತ್ತದೆ. ಸಂಕಮ್ಮ, ನೀಲೇಗೌಡರಿಬ್ಬರು ಮಾದಯ್ಯನನ್ನು ಒಪ್ಪಿ ಮಕ್ಕಳನ್ನು ದಾನ ಕೊಡುವುದು ಶಾಕ್ತ, ಶೈವ, ನಾಥ, ಬುಡಕಟ್ಟು ಸಂಸ್ಕೃತಿಗಳ ಸಂಕರವಾಗಿ ಕಾಣಿಸಿಕೊಳ್ಳುತ್ತದೆ.

ಇಂದಿನ ಮಾದಯ್ಯನ ದೇವಸ್ಥಾನದ ಎದುರಿಗಿರುವ ಸುಮಾರು ಮೂರು ಮೈಲಿ ದೂರದಲ್ಲಿರುವ ಬೆಟ್ಟವನ್ನು 'ಎದುರು ಬೋಳೆ' ಎಂದು ಕರೆಯುತ್ತಾರೆ. ಈ ಬೆಟ್ಟದಲ್ಲಿ ಮಾದಯ್ಯನ ಶಿಶು ಮಕ್ಕಳಾದ ಕಾರಯ್ಯ, ಬಿಲ್ಲಯ್ಯರ ಗದ್ದಿಗೆಗಳಿವೆ.

ಕಂಪಣ ಬೇಡ

ಆ ಕಾಲದ ಸಾಂಸ್ಕೃತಿಕ ಚರಿತ್ರೆಯನ್ನು ಗಮನಿಸಿದರೆ ನಡುಮಲೆ ಬೇಡಗಂಪಣರ ರಾಜ್ಯ. 'ಕಂಪಣ' ಬೇಡರು ವಿಜಯನಗರ ಕಾಲದಿಂದಲೂ ಪ್ರಮುಖ ಜನಾಂಗವಾಗಿತ್ತು. 'ಕಂಪಣ' ಎಂಬುದು ಹೆಸರೂ ಹೌದು. 'ವೀರ ಕಂಪಣ' ವಿಜಯನಗರ ಅರಸನೊಬ್ಬನ ಮಗನ ಹೆಸರೂ ಆಗಿತ್ತು. ಒಂದು ನಿರ್ದಿಷ್ಟ ವ್ಯಾಪ್ತಿಯ ಆಡಳಿತ ಘಟಕಕ್ಕೂ 'ಕಂಪಣ' ಎಂದು ಕರೆಯುವುದಿತ್ತು. ಆ ಹಿನ್ನೆಲೆಯ ಬೇಡಗಂಪಣರು ನಡುಮಲೆಯಲ್ಲಿದ್ದು ಮಾದಯ್ಯನ ಒಕ್ಕಲಾಗಿ, ಭಕ್ತರಾಗಿ, ಅವನ ಪೂಜಾಕಾರ್ಯದ ಹಕ್ಕುದಾರರಾಗುತ್ತಾರೆ. ತಮ್ಮನ್ನು ಅವರು ನಾವು ಬೇಡರ ಕಣ್ಣಯ್ಯನ ಮೂಲದ ವರು ಎಂದು ಹೇಳಿಕೊಳ್ಳುತ್ತಾರೆ. ಹೀಗೆ ಆದಿಶೈವ ಪಂಥಿಯನಾದ ಬೇಡರ ಕಣ್ಣಪ್ಪನ ಮೂಲ ಹೇಳುವ ಬೇಡರೆ ಮಾದಯ್ಯನ ತಮ್ಮಡಿಗಳಾಗಿ ನಿಲ್ಲುವುದು ಇಂದಿಗೂ ಅವರೆ ಆ ಬಾಬನ್ನು ಹೊಂದಿರುವುದು ಗಮನಾರ್ಹ ಸಂಗತಿ. ಶೈವನಾಥ ಹಿನ್ನೆಲೆಯ ಇವರು ಲಿಂಗ ನಿರಾಕಾರಿಗಳಾಗಿದ್ದು ವೀರಶೈವ 'ದೀಕ್ಷೆ' ಮೀರಿದವರು. ಆದರೆ ವೀರಶೈವಕ್ಕೆ ಇಂದು ಜೋತುಬಿದ್ದು ವೀರಶೈವೀಕರಣಕ್ಕೆ ತುತ್ತಾಗಿದ್ದಾರೆ.

ಸೌಹಾರ್ದ ದೇವ ದೇವ

ಮಾದಯ್ಯನ ಸಾಂಸ್ಕೃತಿಕ ಚರಿತ್ರೆಯನ್ನು ಗಮನಿಸಿದರೆ ಆತ ಒಬ್ಬ ಸೌಹಾರ್ದಯುತ ಶೈವ ದೇವತೆಯಾಗಿ ಕಾಣುತ್ತಾನೆ. ವೈದಿಕ ಸ್ವಭಾವಗಳನ್ನು ಮೈಗೂಡಿಸಿಕೊಂಡ ವೀರಶೈವ ಮಠಗಳಿಂದ ಮಾದಯ್ಯ ದೂರ ನಿಲ್ಲುತ್ತಾನೆ. ಅವೈದಿಕ, ನಾಥಸಿದ್ಧ ತನಗಳ ಮಾದಯ್ಯ ತಾನು ನೆಲೆನಿಲ್ಲ ಬಯಸಿದ ಆಸುಪಾಸಿನ ಪಂಥ-ಸಂಸ್ಕೃತಿಗಳ ಜೊತೆ ಸೌಹಾರ್ದ ನೀತಿ

ಅನುಸರಿಸುತ್ತಾನೆ. ಬಿಳಿಗಿರಿಯ ರಂಗಸ್ವಾಮಿ, ಮುಡುಕು ತೊರೆ ಮಲ್ಲಯ್ಯ, ಶಾಕ್ತರಾದ ದೇವಮ್ಮ, ಕಾಳಮ್ಮ ಮೊದಲಾದವರ ಜೊತೆ ಈತ ನಡೆದುಕೊಳ್ಳುವುದರಲ್ಲಿ ಸ್ನೇಹ ಮತ್ತು ಹೊಂದಾಣಿಕೆ ನೀತಿಯನ್ನು ಕಾಣಬಹುದು. ದೇವಮ್ಮನ ಮನೆಗೆ ಭಿಕ್ಷಕ್ಕೆ ಹೋಗುವಾಗ ಮಾದಯ್ಯ ತನ್ನ ಸಹಾಯಕ್ಕೆ ಎಂಬಂತೆ ರಂಗಯ್ಯ, ಮಲ್ಲಯ್ಯರನ್ನು ಕರೆದೊಯ್ಯುತ್ತಾನೆ. ಹಾಗೇ ಕಂಪಣ ಬೇಡರ, ಸೋಲಿಗರ ಸೇವೆ, ಆಹಾರ, ಆರೈಕೆಯ ಏಕತಾನತೆಯನ್ನು ಮುರಿಯಲು ಎಣ್ಣೆಮಜ್ಜನ ಸೇವೆ ಬಯಸುತ್ತಾನೆ. ಅದಕ್ಕಾಗಿ ನಾಡಿನ ನಡುವೆ ಇರುವ ರಾಮವ್ವ ಮೂಗಪ್ಪ ಶರಣರ ಒಕ್ಕಲು ಪಡೆಯಬಯಸುತ್ತಾನೆ. ರಾಮವ್ವ ಮೂಗಪ್ಪ ಮುಡುತೊರೆ ಮಲ್ಲಯ್ಯನ ಬೆಟ್ಟದ ತಪ್ಪಲಿನ ಸರಗೂರಿನವರು. ಜವುಳು ಮಣ್ಣಲ್ಲಿ ಉಪ್ಪು ತಯಾರಿಸುವ ಉಪ್ಪಾರರು. ಭಗೀರಥನ ಕುಲದವರು. ಶಿವ ನಿವಾಸ ಗೌರಿಶಂಕರ ಶಿಖರದಿಂದ ಗಂಗೆಯನ್ನು ಭೂಮಿಗೆ ಹರಿಸಿ ಜನಕಲ್ಯಾಣಕಾರಕ ನಾಗರೀಕತೆ ಬೆಳೆಯಲು ಕಾರಣನಾದವ ಭಗೀರಥ. ಈತ ಆದಿಶೈವ ಕುಲದವನಾಗಿದ್ದು ರಾಮವ್ವ ಮೂಗಪ್ಪ ಇಂತಹ ಹಿನ್ನೆಲೆಯವರು. ಇವರು ಮಲ್ಲಯ್ಯ, ರಂಗಯ್ಯನ ಒಕ್ಕಲಿನವರು. ಮಾದಯ್ಯ ಈ ಶರಣರೇ ತನಗೆ ಎಣ್ಣೆ ಮಜ್ಜನ ಸೇವೆ ಮಾಡಲು ಒಕ್ಕಲಾಗಬೇಕೆಂದು ಅವರನ್ನು ತನಗೆ ಒಕ್ಕಲು ಕೊಡುವಂತೆ ತನ್ನ ಸ್ನೇಹಿತರಾದ ಮಲ್ಲಯ್ಯ, ರಂಗಯ್ಯರನ್ನೇ ಕೇಳುತ್ತಾನೆ.

ರಾಮವ್ವ ಟಿ. ನರಸೀಪುರ ತಾ. ಕುರುಬೂರು ಕೊತ್ತೇಗಾಲದ ಬಲ್ಲಮ್ಮನ ಮಗಳು. ಅಲ್ಲಿಂದ ಸರಗೂರ ಉಪ್ಪಾರ ಮನೆತನಕ್ಕೆ ಮದುವೆಯಾಗಿ ಬರುತ್ತಾಳೆ. ತಾಯಿ ಮನೆ ಕಡೆಯಿಂದ ರಾಮವ್ವ ಮಲ್ಲಯ್ಯನ ಒಕ್ಕಲು, ಗಂಡನ ಮನೆಯಲ್ಲಿ ರಂಗಯ್ಯನ ಒಕ್ಕಲು. ಮೂಗಪ್ಪ ರಾಮವ್ವ ಮಗ. ಆಗಾಗಿ ಇವರು ಶೈವ ವೈಷ್ಣವ ಒಕ್ಕಲಿನವರು. ಈ ಶರಣರನ್ನು ಬಿಟ್ಟುಕೊಡಲು ಮಾದಯ್ಯ ತನ್ನ ಗೆಳೆಯರನ್ನು ಕೇಳಿಕೊಳ್ಳುವುದು ಸೌಜನ್ಯ, ಸೌಹಾರ್ದತೆ ಸಂಕೇತ. ಮಲ್ಲಯ್ಯ, ರಂಗಯ್ಯ ದೈವಗಳೇ ಬಿಟ್ಟುಕೊಡಲು ಸಮ್ಮತಿಸಿದರು ಭಕ್ತರಾದ ರಾಮವ್ವ, ಮೂಗಪ್ಪ, ಮಾದಯ್ಯನ ಒಕ್ಕಲಾಗಲು ಒಪ್ಪುವುದಿಲ್ಲ. ಆಗ ಮಾದಯ್ಯ ಸ್ವತಃ ಭಕ್ತರನ್ನು ಬೇಡುತ್ತಾನೆ, ಕಾಡುತ್ತಾನೆ. ಒಪ್ಪದಿದ್ದಾಗ ಅವರಿಗೆ ಕಷ್ಟಗಳನ್ನು ಕೊಟ್ಟು, ಪರೀಕ್ಷೆಗಳನ್ನು ಒಡ್ಡಿ ಒಪ್ಪುವಂತೆ ಮಾಡುತ್ತಾನೆ. ಆಗ ಮಾದಯ್ಯ ಮತ್ತು ಸರಗೂರ ಶರಣರ ಜತೆ ಒಂದು ಒಪ್ಪಂದವಾಗುತ್ತದೆ. ರಾಮವ್ವ ಮೂಗಪ್ಪ ತಾವು ಯಾವ ದೈವದ ಒಕ್ಕಲಾಗಿದ್ದಾರೊ ಹಾಗೇ ಇರಬಹುದು. ಹಾಗಿದ್ದುಕೊಂಡೆ ಮಾದಯ್ಯನ ಎಣ್ಣೆಮಜ್ಜನ ಸೇವೆ ನಡೆಸಿಕೊಡಬಹುದು. ಅಂದರೆ ಅವರು ಮಲ್ಲಯ್ಯನ ಶೈವಪಂಥಕ್ಕೂ, ರಂಗಯ್ಯನ ವೈಷ್ಣವ ಪಂಥಕ್ಕೂ ನಿಷ್ಠುರಾಗಿದ್ದು ಮಾದಯ್ಯನ ಸೇವೆ ಮಾಡುವುದು. ಅದರಂತೆ ಇಂದಿಗೂ ಸರಗೂರ ಸಮೀಪವಿರುವ ರಾಮವ್ವ ಮೂಗಪ್ಪನ ವಂಶಸ್ಥರು ವೈಷ್ಣವ ದಾಸ ಪಂಥದವರಾಗೇ ಇರುವುದು ಗಮನಾರ್ಹ.

ಹೀಗೆ ಮಾದಯ್ಯ ಸೌಹಾರ್ದಯುತವಾಗಿ ತನ್ನ ಸಮಕಾಲೀನ ಪಂಥ ಪರಂಪರೆಗಳ ಜೊತೆ ನಡೆದುಕೊಳ್ಳುತ್ತಾನೆ. ಮುಡುಕುತೊರೆ ಬೆಟ್ಟದ ಮೇಲೆ ಮಲ್ಲಯ್ಯನ ಗುಡಿ ಪಕ್ಕದಲ್ಲೇ ಮಾದಯ್ಯನ ಪಾದ ಊರಿದ ಗದ್ದಿಗೆ ಇದೆ. ಅಲ್ಲಿ ಮಾದಯ್ಯನ ಪೂಜೆ ನಡೆಯುತ್ತದೆ. ಬೆಟ್ಟದ ತಪ್ಪಲಿನ ಸರಗೂರು ತೋಪಲ್ಲಿ ಮಾದಯ್ಯ ತಂಗಿದ್ದನೆಂದು ಪ್ರತೀತಿ ಇದೆ. ಅಲ್ಲಿ ಮಾದಯ್ಯನ ದೇವಾಲಯ ಕಟ್ಟಲಾಗಿದೆ. ಬಿಳಿಗಿರಿ ರಂಗನಾಥನ ಬೆಟ್ಟದ ದೊಡ್ಡ ಸಂಪಿಗೆ ಮತ್ತು ಹಲವು ಕಡೆಗಳಲ್ಲಿ ಮಾದಯ್ಯನ ನೆಲೆಗಳಿವೆ. ಇವು ರಂಗಸ್ವಾಮಿಯ ಜತೆಗಿನ ಸೌಹಾರ್ದತೆಯನ್ನು ಸೂಚಿಸುತ್ತವೆ. ಏಳುಮಲೆಯ ಮಾರ್ಗ ಮಧ್ಯದಲ್ಲಿ ಸಿಗುವ ರಂಗಸ್ವಾಮಿಗೆ "ರಂಗಸ್ವಾಮಿ ಒಡ್ಡಿ"ನಲ್ಲಿ ಪೂಜೆ ನೇಮಿಸುತ್ತಾನೆ. ಇದು ಅವನ ಸೌಹಾರ್ದತೆ ಹೇಳುತ್ತದೆ.

ಮುಡುಕುತೊರೆ ಬೆಟ್ಟದ ಮೇಲಿನ ಮಾದಯ್ಯನ ಗದ್ದಿಗೆ, ಸರಗೂರ ದೇವಾಲಯ ಮಾದಯ್ಯನ ಇಲ್ಲಿನ ಬೇಟಿಯನ್ನು ದೃಢೀಕರಿಸುತ್ತವೆ. ರಾಮವ್ವೆ ಮೂಗಪ್ಪನ ಮನೆತನ ದವರು ಸರಗೂರ ಸಮೀಪದ ಅಯ್ಯನವರ ಹುಂಡಿಯಲ್ಲಿ ಇನ್ನು ಇದ್ದಾರೆ. ಮೂಗಪ್ಪನಿಗೆ ದೊಡ್ಡ ದಾಸಪ್ಪ, ವೃಂದಾವನ ಸ್ವಾಮಿ, ಚಿಕ್ಕಸ್ವಾಮಿ ಎಂಬ ಮೂರು ಜನ ಮಕ್ಕಳಿದ್ದರು. ಆ ಮೂರು ಜನ ಮಕ್ಕಳ ಮನೆತನ ಇಂದಿಗೂ ಇದ್ದಾರೆ. ಅವರು ಮಾದಯ್ಯನ ಎಣ್ಣೆಮಜ್ಜನ ಸೇವೆ ಮುಂದುವರಿಸುತ್ತಿದ್ದಾರೆ. ಸರಗೂರ ತೋಪಿನಲ್ಲಿ ಮಾದಯ್ಯನ ಗುಡಿ ಕೆಳಗೆ ತೋಪಿನಲ್ಲಿ ರಾಮವ್ವ, ಮೂಗಪ್ಪನವರ ಸಮಾಧಿಗಳಿವೆ. ಅವುಗಳನ್ನು ದೇವಾಲಯ ಗಳನ್ನಾಗಿ ಪರಿವರ್ತಿಸಿ ರಾಮಾಂಬಿಕ, ಶಂಕರಪ್ರಿಯ ದೇವಸ್ಥಾನಗಳೆಂದು ಕರೆಯಲಾಗುತ್ತಿದೆ. ಇದೇ ತೋಪಿನಲ್ಲಿ ಇವರ ಮಕ್ಕಳಾದ ದೊಡ್ಡದಾಸಪ್ಪ, ವೃಂದಾವನ ಸ್ವಾಮಿ, ಚಿಕ್ಕಸ್ವಾಮಿ ಮತ್ತವರ ವಂಶಸ್ಥರ ಸಮಾಧಿಗಳಿವೆ.

ಹೀಗೆ ಮಾದಯ್ಯ ವೈಷ್ಣವಪಂಥ ಮತ್ತು ಭಕ್ತರ ಜತೆ ಸೌಹಾರ್ಧತೆ ತೋರುತ್ತಾನೆ. ಸಿದ್ಧಪ್ಪಾಜಿ ಕೂಡ ತನ್ನ ಗುರು ಮಂಟೇಸ್ವಾಮಿಗೆ ಮಠಮನೆ ಮಾಡಲು ಬೇಕಾದ ಕಬ್ಬಿಣ ಭಿಕ್ಷೆ ತರಲು ಹಲಗೂರಿಗೆ ಹೋಗುವಾಗ ಮುತ್ತತ್ತಿರಾಯನ ಜತೆ ಸ್ನೇಹ ಬೆಳೆಸುವ ಪ್ರಸಂಗವಿದೆ. ಅದೇ ರೀತಿ ಚಿಕ್ಕಲ್ಲೂರ ಸಿದ್ಧಪ್ಪಾಜಿಯಲ್ಲಿ ಮುತ್ತತ್ತಿರಾಯನಿಗೆ ಒಂದು ದಿನದ ಸೇವೆ ಇದೆ. ಇದು ಸಿದ್ಧಪ್ಪಾಜಿ- ಮುತ್ತತ್ತಿರಾಯನ ಮೈತ್ರಿಯ ಸಂಕೇತ. ಅಂದು ಖಂಡಾಯಗಳು ಮತ್ತು ನಾರಾಯಣ ದೇವರ ಅರಿಗೆಗಳು ಒಟ್ಟಿಗೆ ಪೂಜೆಗೊಳ್ಳುತ್ತವೆ. ದಾಸರು ಮತ್ತು ನೀಲಗಾರರು ಒಟ್ಟಾಗಿ ಸೇರಿ ನಾಮ ಸೇವೆ ಮಾಡುತ್ತಾರೆ. ಮಾದಯ್ಯ, ಸಿದ್ಧಪ್ಪಾಜಿಯರ ಈ ರೀತಿಯ ವೈಷ್ಣವ ದೈವ ಮತ್ತು ಪಂಥಗಳ ಜತೆಗಿನ ಸಂಬಂಧಗಳು ಸೌಹಾರ್ಧತೆಯ ಸಂಕೇತಗಳೆ?

ಮಹಿಷಮಂಡಲವೆಂಬ ಮೈಸೂರಿಗೆ ಶತಮಾನಗಳ ಹಿಂದೆಯೇ ಮಹಾದೇವ ಬೌದ್ಧಬಿಕ್ಕು ಪಾಟಲೀಪುತ್ರವೆಂಬ ಉತ್ತರ ದೇಶದಿಂದ ಬರುತ್ತಾನೆ. ಅಂದರೆ ಕತ್ತಲ ರಾಜ್ಯವೆಂಬ ಮೈಸೂರು ಸೀಮೆಗೆ ಬೌದ್ಧ ಧರ್ಮ ಹಳೆಯದೆ. ಇಂತಹ ಮೈಸೂರು ಸೀಮೆಯ ಕತ್ತಲ ರಾಜ್ಯಕ್ಕೆ ಜನಪದ ಕಾವ್ಯ ನಾಯಕ ಮಾದಯ್ಯನು ಪ್ರವೇಶಿಸುವುದು ಉತ್ತರದಿಂದಲೆ ಬಂದು. ಕದ್ರಿಯ ಬೌದ್ಧಸಿದ್ಧ ಕೇಂದ್ರ ನಾಥಸಿದ್ಧಕೇಂದ್ರವಾದಂತೆ ಮೈಸೂರು ಸೀಮೆಯಲ್ಲಿ ಆಗಿರುವ ಕೇಂದ್ರಗಳನ್ನು ಶೋಧಿಸಬೇಕು. ಮಾದಯ್ಯ ಅಂತಹ ಬದಲಾದ ನಾಥಸಿದ್ಧನಾಗಿ ೧೫-೧೬ನೇ ಶತಮಾನದಲ್ಲಿ ಮುಂದುವರಿದನೆ ಎಂಬ ಹಿನ್ನೆಲೆಯಲ್ಲಿಯೂ ಮಾದಯ್ಯನ ಪರಂಪರೆಯನ್ನು ಪರಿಶೀಲಿಸಬಹುದು.

ದೇವರ ಗುಡ್ಡರ ದೀಕ್ಷೆ

ಮಾದಯ್ಯನ ಪಂಥದ ಉಳಿವು ಮತ್ತು ಮುಂದುವರಿಕೆ ಈ ದೀಕ್ಷೆಯನ್ನು ಅವಲಂಬಿಸಿದೆ. ಕಂಪಣ ಬೇಡರು, ಸೋಲಿಗರು, ಹೊಲೆಯ, ಮಾದಿಗ, ಕುರುಬ, ಕುಂಬಾರ, ಉಪ್ಪಾರ, ಪರಿವಾರ ನಾಯಕ, ಗಾಣಿಗ, ಮಡಿವಾಳ, ಒಕ್ಕಲಿಗ ಗೌಡ ಲಿಂಗಾಯಿತ ಹೀಗೆ ಬಹುತೇಕ ಎಲ್ಲಾ ಸಮುದಾಯಗಳು ಒಕ್ಕಲಾಗಿ ದೀಕ್ಷೆ ಪಡೆಯುತ್ತಾರೆ. ಇವರೇ ದೇವರ ಗುಡ್ಡರು.

ವಿವಾಹ ಪೂರ್ವದಲ್ಲಿ ಕುಟುಂಬದ ಗಂಡುಮಗನಿಗೆ ದೀಕ್ಷೆ ಕೊಡಲಾಗುತ್ತದೆ. ದೀಕ್ಷೆ ಒಂದು ಶುಭಕಾರ್ಯವಾಗಿದ್ದು, ವ್ಯಕ್ತಿಯೊಬ್ಬನನ್ನು ಮಾದಯ್ಯನ ಪಂಥದ ಪ್ರತಿನಿಧಿಯನ್ನಾಗಿ ಮಾಡಿ ಅದನ್ನು ಪ್ರಚಾರ ಮಾಡಲು ಅಪೇಕ್ಷಿಸುವ ಆಚರಣೆಯಾಗಿದೆ. ಸೋಮವಾರ, ಶುಕ್ರವಾರಗಳು ದೀಕ್ಷೆಗೆ ಪ್ರಶಸ್ತ ದಿನಗಳು. ದೀಕ್ಷೆಗೆ ಒಳಗಾಗುವ ಹುಡುಗನಿಗೆ ತಲೆ ಬೋಳಿಸಿ, ಸ್ನಾನ ಮಡಿ ಮಾಡಿಸಿ ಬಿಳಿ ಅಂಗಿ, ಪಂಚೆ, ಟವಲ್ಲು ಹಾಕಿಸುತ್ತಾರೆ. ಪುರುಷಕಾರಿ ಎಂಬ ಹಿರಿಯ ದೇವರ ಗುಡ್ಡಯ್ಯಾ, ಮಾದಯ್ಯನ ಹೆಸರಲ್ಲಿ ರುದ್ರಾಕ್ಷಿ ಧಾರಣೆ ಮಾಡಿ "ಶೈವ ದೀಕ್ಷೆ" ನೀಡಿ ಗುಡ್ಡನಿಗೆ ನೀತಿ ಬೋಧನೆ ಮಾಡುತ್ತಾನೆ. ಇದುವರೆಗೆ ನಾನು ನನ್ನ ತಂದೆ, ತಾಯಿ ಮಗನಾಗಿದ್ದೆ, ಇನ್ನುಮುಂದೆ ಮಾದಯ್ಯನ ಮಗ. ವಂಚನೆ, ಅನ್ಯಾಯ, ಅತ್ಯಾಚಾರ, ಹಿಂಸೆ ಮಾಡದೆ ಒಳ್ಳೆಯ ಮಾತನಾಡುತ್ತ ನಾಲ್ಕು ಮನೆ ಭಿಕ್ಷ ಮಾಡಿದರೂ, ಹಂಚಿ ಉಣ್ಣುವೆ ಎಂದು ಗುಡ್ಡನಾದವ ಎಲ್ಲರ ಸಮ್ಮುಖದಲ್ಲಿ ವಾಗ್ದಾನ ಮಾಡುತ್ತಾನೆ. ನಂತರ ಅವನು ನಾಗಬೆತ್ತ, ಜಾಗಟೆ ಅಥವಾ ಕಂಸಾಳೆ, ಜೋಳಿಗೆ ಸ್ವೀಕರಿಸುತ್ತಾನೆ. ಇದನ್ನು ದೀಕ್ಷೆ ಎನ್ನಲಾಗುವುದು. ದೀಕ್ಷೆ ನಂತರ ಗುಡ್ಡಯ್ಯ ವಿವಾಹವಾಗಬಹುದು. ಪ್ರತೀ ಸೋಮವಾರ, ಶುಕ್ರವಾರ ಮಾದಯ್ಯನ ಗದ್ದಿಗೆ ಪೂಜಿಸಿ ನಾಲ್ಕಾರು ಮನೆ ಬಿಕ್ಷಾ ಮಾಡುತ್ತಾ ಮಾದಯ್ಯನ ಸ್ತುತಿ ಮಾಡುತ್ತಾನೆ. ತಂಬೂರಿ ನುಡಿಸುವುದು ಮತ್ತು ಕಾವ್ಯ ಹಾಡುವುದನ್ನು ಕಲಿತ ಗುಡ್ಡಯ್ಯರು ಅದನ್ನೇ ವೃತ್ತಿ ಮಾಡಿಕೊಂಡು ಊರೂರ ಮೇಲೆ ಹಾಡುತ್ತಾ ಭಿಕ್ಷಾ ಸಾರುತ್ತಾರೆ.

ದೇವರ ಗುಡ್ಡರ ದೀಕ್ಷೆ ಎಂದರೆ ವೀರಶೈವ ಪರಿಕಲ್ಪನೆಯ ಲಿಂಗಧಾರಣೆಯ ದೀಕ್ಷೆಯಲ್ಲ. ರುದ್ರಾಕ್ಷಿಧಾರಣೆ ಜೊತೆಗೆ ಮಾದಯ್ಯನ ಹೆಸರಿನ ಶಿವ ದೀಕ್ಷೆಯಾಗಿರುತ್ತದೆ. ಈ ಆಚರಣೆಯು ಮಾದಯ್ಯನ ಪಂಥ ವೀರಶೈವವಲ್ಲ ಎಂಬುದಕ್ಕೆ ಇಂದಿಗೂ ಪುರಾವೆಯಾಗಿ ಉಳಿದಿದೆ. ಮಾದಯ್ಯನ ದೇವರ ಗುಡ್ಡರ ಈ ಪಂಥ ಚಾಮರಾಜನಗರ, ಮೈಸೂರು, ಕೊಡಗು, ಹಾಸನ, ಮಂಡ್ಯ, ಬೆಂಗಳೂರು ಜಿಲ್ಲೆಗಳನ್ನೊಳಗೊಂಡ ದಕ್ಷಿಣ ಕರ್ನಾಟಕ ಮತ್ತು ತಮಿಳುನಾಡು ಭಾಗಗಳಲ್ಲಿ ಇಂದಿಗೂ ಅಸ್ತಿತ್ವದಲ್ಲಿದೆ. ಇದು ಚರಿತ್ರೆಯಲ್ಲಿ ದಾಖಲಾಗದೆ ಜನಸಮುದಾಯಗಳ ನಡುವೆ ಇಂದಿಗೂ ಜೀವಂತವಿರುವ ಒಂದು ಸಂಸ್ಕೃತಿ, ಧರ್ಮ ಮತ್ತು ಜನಪದವೆಂಬ ಜನಚರಿತ್ರೆಯಾಗಿದೆ. ನಾಗಬೆತ್ತ, ಜೋಳಿಗೆ, ಜಾಗಟೆ, ಕಂಸಾಳೆ, ಹುಲಿ ಮತ್ತು ಮಾದಯ್ಯ ಈ ಸಂಸ್ಕೃತಿಯ ಸಂಕೇತಗಳಾಗಿವೆ.

"ಹೆಣ್ಣು ಮಕ್ಕಳನ್ನು ಗುಡ್ಡಮ್ಮ ಅಥವಾ ಗುಡ್ಡಿ ಬಿಡುವ ಪದ್ಧತಿ ಹರಿಜನರಲ್ಲಿ ಮಾತ್ರ ತೀರ ವಿರಳವಾಗಿ ನಡೆದುಕೊಂಡು ಬರುತ್ತಿದೆ. ಆದರೆ ಸೂತಕವಾಗುವ ಹೆಂಗಸನ್ನು ಗುಡ್ಡಿ ಬಿಡಬಾರದೆಂದು ಕೆಲವರು ಹೇಳುತ್ತಾರೆ. ಗುಡ್ಡಿ ಮಾದೇವನ ಶಿಶು ಮಗಳಾದ ಮೇಲೆ ಅವಳಿಗೆ ವಿವಾಹವಿಲ್ಲ. ಯಾವನಾದರು ಗುಡ್ಡ ಇಷ್ಟಪಟ್ಟರೆ ಅವನ ಸೇವೆಯನ್ನು ಗುಡ್ಡಿ ಮಾಡಬೇಕಾಗುತ್ತದೆ. ಹಬ್ಬ ಹರಿದಿನಗಳಲ್ಲಿ ಆಕೆಗೆ ಗೌರವಾಧಾರಗಳು ಸಲ್ಲುತ್ತವೆ. ಇತ್ತೀಚೆಗೆ ಈ ಪದ್ಧತಿ ಮರೆಯಾಗುತ್ತಿದೆ. ಗಂಡಸರು ಮಾತ್ರ ಗುಡ್ಡರಾಗುವುದು ಸರ್ವೇಸಾಮಾನ್ಯ."[೧೩]

ಆಚರಣೆಗಳು

ನಡುಮಲೆಯ ಗುಡಿಯೊಳಗೆ ಮಾದಯ್ಯ ಲಿಂಗರೂಪದಲ್ಲಿ ಪೂಜೆಗೊಳುತ್ತಿದ್ದಾನೆ. ಐಕ್ಯಸ್ಥಳವೆನ್ನಲಾಗುವ ಅಲ್ಲಿರುವುದು ಪೀಠವಿರುವ ಲಿಂಗವಲ್ಲ. ಪೀಠವಿಲ್ಲದ ಕಪ್ಪುಕಲ್ಲಿನ ಏಕಲಿಂಗ ಕೂಡಲ ಸಂಗಮದ ಬಸವಣ್ಣನ ಐಕ್ಯಸ್ಥಳದ ಲಿಂಗದ ರೀತಿ. ಇದರ ಮೇಲೆ ನಾಗಾಭರಣದ ಚಿನ್ನದ, ಬೆಳ್ಳಿಯ ಕೊಳಗಳನಿಟ್ಟು ಪೂಜಿಸಲಾಗುತ್ತದೆ. ಇಲ್ಲಿ ದೀಪಾವಳಿ, ಯುಗಾದಿ, ಶಿವರಾತ್ರಿ, ಸಂಕ್ರಾಂತಿ, ಗೌರಿ, ಕಾರ್ತಿಕ ತಿಂಗಳಂದು ವಿಶೇಷ ಪೂಜೆ, ಜಾತ್ರೆಗಳು ನಡೆಯುತ್ತವೆ. ಹಾಲರುವೆ ಮಾದಯ್ಯನಿಗೆ ಸಲ್ಲುವ ವಿಶೇಷ ಆಚರಣೆ. ಬೇಡಗಂಪಣ ಋತುಮತಿಯಾಗದ ಹೆಣ್ಣುಮಕ್ಕಳು ಗುಡಿಗೆ ಸಮೀಪದ ಹಾಲಳ್ಳದಿಂದ ಹೂ ಹೊಂಬಾಳೆ ಧರಿಸಿ ಕರಗ ಪೂಜಿ ತರುವುದು ಹಾಲರುವೆ. ಈ ಸಂದರ್ಭದಲ್ಲಿ ಬೇಡಗಂಪಣರು ಕತ್ತಿ ಪವಾಡ ಮಾಡುತ್ತಾರೆ. ದೇವಾಲಯದಲ್ಲಿ ಜಾಗಟೆ, ನಗಾರಿ ಬಾರಿಸುತ್ತಾರೆ. ಶಿವರಾತ್ರಿಗೆ ಕೊಂಡೋತ್ಸವ ಮಾಡುವ ಆಚರಣೆ ಮಾದಯ್ಯನ ಪರಂಪರೆಯಲ್ಲೂ ಇದೆ. ತಮ್ಮಡಿಗಳು ಗುರುಗಳ ಮೂಲಕ ಇದನ್ನು ಮಾದಯ್ಯನಿಗೆ ಅರ್ಪಿಸುತ್ತಾರೆ. ವಿಶೇಷವೆಂದರೆ ಬರುವ ಪರಿಶೆ ಎಲ್ಲರು ಕೊಂಡ ಹಾಯಬಹುದು. ಇದು ತಮ್ಮನ್ನು ತಾವೇ ಸತ್ಯ ಪರೀಕ್ಷೆಗೆ ಒಡ್ಡಿ ಕೊಳ್ಳುವ ಮತ್ತು ತಮ್ಮ ಪರಿಶುದ್ಧತೆಯನ್ನು ಸಾಬೀತುಪಡಿಸುವುದಾಗಿದೆ.

ಪ್ರತೀ ತಿಂಗಳು ಹಾಗೂ ಎಲ್ಲ ಹಬ್ಬಗಳಂದು ಮಾದಯ್ಯನಿಗೆ ಎಣ್ಣೆಮಜ್ಜನ ಸೇವೆ ನಡೆಯುತ್ತದೆ. ಸರಗೂರ ಶರಣರಾದ ರಾಮವ್ವ ಮೂಗಪ್ಪನ ವಂಶಸ್ಥರು ಇಂದಿಗೂ ಇದನ್ನು ನಡೆಸಿಕೊಡುತ್ತಾರೆ. ಎಳ್ಳನ್ನು ಅರೆದು ಎಣ್ಣೆ ತೆಗೆದು ಲಿಂಗಕ್ಕೆ ಹಚ್ಚಿ ನೀರು, ಎಳನೀರಿನಿಂದ ತೊಳೆಯುವುದನ್ನು ಎಣ್ಣೆ ಮಜ್ಜನ ಎನ್ನುವರು. ಮೂರು ನಾಮ ಧರಿಸಿದ ವೈಷ್ಣವ ಪಂಥದ ದಾಸಯ್ಯಗಳ ವೇಷದಲ್ಲೇ ಸರಗೂರ ಶರಣರು ಈ ಆಚರಣೆ ನಡೆಸುವುದು ಗಮನಾರ್ಹ. ಇದು ಮಾದಯ್ಯ ಮತ್ತು ಬಿಳಿಗಿರಿ ರಂಗಯ್ಯನ ಸ್ನೇಹ ಸೌಹಾರ್ದತೆ ಕುರುಹೊ ಅಥವಾ ವೈಷ್ಣವ ಭಕ್ತರ ಭಾಗವಹಿಸುವಿಕೆಯ ಪಳೆಯುಳಿಕೆಯೂ ಇರಬೇಕು. ಎಳ್ಳು, ಬೆಲ್ಲ, ಏಲಕ್ಕಿ ಸೇರಿಸಿ ಕುಟ್ಟಿ ಮಾಡುವ ಮಿಶ್ರಣವನ್ನು ಎಣ್ಣೆಮಜ್ಜನ ಪ್ರಸಾದವೆಂದು ಹಂಚಲಾಗುವುದು.

ದೂಪದ ಸೇವೆ, ಪಂಜಿನ ಸೇವೆ, ಉರುಳು ಸೇವೆ, ಮುಡಿ ಸೇವೆ ಒಚ್ಚಮಗ್ಗಲ ಸೇವೆ ಎಂಬ ಹೆಸರಲ್ಲಿ ಪರಿಶೆ ಮಾದಯ್ಯನಿಗೆ ವಿವಿಧ ಆಚರಣೆಗಳನ್ನು ಸಲ್ಲಿಸುತ್ತದೆ. 'ರಜ' ಹೊಡೆಯುವುದು ಬಹುತೇಕ ಹೆಂಗಸರು ಮಾಡುವ ಆಚರಣೆ. ಮಕ್ಕಳ ಫಲವನ್ನು ಒಳಗೊಂಡು ವಿವಿಧ ಕೋರಿಕೆಗಳ ಈಡೇರಿಕೆಗಳಿಗಾಗಿ ಮಹಿಳೆಯರು ದೇವಾಲಯದ ಒಳಾಂಗಣ, ಹೊರಾಂಗಣಗಳ ಕಸ ತೆಗೆಯುವುದನ್ನು ರಜ (ದೂಳು) ಹೊಡೆಯುವುದು ಎನ್ನಲಾಗುವುದು. ದೇವಾಲಯದ ಸುತ್ತಲೂ ಒಂದೇ ಮಗ್ಗಲಲ್ಲಿ ತೆವಳುವುದು ಒಚ್ಚಮಗ್ಗಲ ಸೇವೆ. ಇದು ಬಹುತೇಕ ಹೆಂಗಸರು ಸಲ್ಲಿಸುವ ಆಚರಣೆ.

ಭಕ್ತಾದಿಗಳು ತಾವು ಬೆಳೆದ ಬೆಳೆಯ ಮುಂದಲ ಧವಸದಾನ್ಯಗಳನ್ನು ತಂದು ಮಾದಯ್ಯನ ತೇರಿಗೆ ಎರಚುವುದಿದೆ. ಹಣ್ಣು ಜವನ ತೆಂಗಿನಕಾಯಿಗಳನ್ನು ಎಸೆಯುವುದಿದೆ. ಹಿಟ್ಟಿನ ಮುದ್ದೆ, ಕೋಳಿಗಳನ್ನು ತೇರಿಗೆ ಎಸೆಯುವುದು ವಿಶೇಷ ಆಚರಣೆ. ಇದು ಕ್ರಮೇಣ ಮಾಂಸಾಹಾರದ ನಿಷಿದ್ಧದ ನಂತರದ ಸಾಂಕೇತಿಕ ಆಚರಣೆಯಾಗಿರಬಹುದು. ಮಾದಯ್ಯನ ತೇರಿನ ಮಾಳದಲ್ಲಿ ಹೆಂಗಸರು ಮಾಡುವ ಮಗ್ಗಲ ಸೇವೆ, ತಿಂಗಳ ಸೇವೆಗಳು ಗಮನಾರ್ಹ.

ಮಂಗಳ

ಮಾದಯ್ಯನ ಪಂಥ ಮತ್ತು ಸಂಸ್ಕೃತಿಯಲ್ಲಿ ಆತ ತಂಗಿದ್ದ ಸ್ಮೃತಿಯ ಸ್ಥಳಗಳು ಇಂದಿಗೂ ಅವನ ಹೆಸರಿನಲ್ಲಿ ದೇವಾಲಯಗಳಾಗಿವೆ. ಕೇರಳ, ತಮಿಳುನಾಡುಗಳನ್ನೊಳಗೊಂಡು ದಕ್ಷಿಣ ಕರ್ನಾಟಕದಾದ್ಯಂತ ಇವನ ಶ್ರದ್ಧಾಕೇಂದ್ರಗಳಿವೆ. ಇಂತ ಕೇಂದ್ರಗಳಲ್ಲಿ ಏಳುಮಲೆ ಅವನ ಕರ್ಮ ಭೂಮಿ. ಸಾಮಾನ್ಯವಾಗಿ ಮಾದಯ್ಯ ಗುಡಿಗಳಲ್ಲಿ ಲಿಂಗರೂಪಿಯಾಗಿ, ನಾಗ ಬೆತ್ತ ರೂಪದಲ್ಲಿ, ಕಂಸಾಳೆ, ಜೋಳಿಗೆ ರೂಪದಲ್ಲಿ, ದಲಿತರಲ್ಲಿ ಗದ್ದಿಗೆಗಳ ರೂಪದಲ್ಲಿ ಆರಾಧಿಸಲ್ಪಡುತ್ತಾನೆ. ಮಾದಯ್ಯನವೆಂದು ಹೇಳಿಕೊಳ್ಳುವ ಕೆಲವು ವಸ್ತುಗಳು ಸಾಲೂರು ಮಠದಲ್ಲಿವೆ ಎನ್ನಲಾಗಿದೆ.

ಮಾದಯ್ಯನ ಬೆಟ್ಟದಲ್ಲಿ ಸಾಲೂರು ಮಠವಿದೆ. ಇದು ಮಾದಯ್ಯನಿಂದಲೇ ಆರಂಭವಾಯಿತು ಎಂಬ ಮಾತಿದೆ. ಸಂಕಮ್ಮನ ಒಕ್ಕಲು ಪಡೆದು ಅವಳ ಮಕ್ಕಳನ್ನು ಶಿಷ್ಯರನ್ನಾಗಿ

ಮಾಡಿಕೊಂಡನು. ಅವರಿಗೆ ಸ್ಥಾಪಿಸಿದುದೇ ಇದು. ಸೋಲಿಗರ ಮಠ ಕ್ರಮೇಣ ಸಾಲೂರು ಮಠವಾಗಿದೆ. ಮಾದಯ್ಯನ ಪಂಥ, ಸಂಸ್ಕೃತಿ, ಪರಂಪರೆಯಲ್ಲಿ ಈ ಮಠದ ಸ್ಥಾನ, ಪಾತ್ರ ಏನೂ ಇಲ್ಲ. ಈ ಮಠದಲ್ಲಿ ಮಾದಯ್ಯ ಬಳಸುತ್ತಿದ್ದನೆಂದು ಹೇಳಲಾಗುವ ಜೋಳಿಗೆ, ನಾಗಬೆತ್ತ, ಪಾದರಕ್ಷೆ, ಕರಡಿಗೆ, ಕಂಸಾಳೆ, ಶಂಖ ಇನ್ನೂ ಮೊದಲಾದ ವಸ್ತುಗಳಿವೆ. ಇವು ಮಾದಯ್ಯನ ಜೀವನ ಪರಿಕರಗಳೇ ಆಗಿದ್ದರೆ ಅವು ಆತನ ಸಾಂಸ್ಕೃತಿಕ ಚರಿತ್ರೆಯ ಭಾಗವೂ ದೊಡ್ಡ ದಾಖಲೆಗಳು ಆಗಿರುತ್ತವೆ. ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಪೂರ್ವಘಟ್ಟಗಳ ಎಪ್ಪತ್ತೇಳು ಮಲೆಗಳ ನಡುವೆ ಮಲೆಯ ಮಾದಯ್ಯ ನೆಲೆಸಿದ ಸಂಸ್ಕೃತಿ ಕೇಂದ್ರವಿದೆ. ಇದೆ ಕೋಟಿ ಕೋಟಿ ಭಕ್ತರ ಜಾತ್ರೆ, ಪೂಜೆ, ಆಚರಣೆಯ ಶ್ರದ್ಧಾಕೇಂದ್ರವಾಗಿದೆ. ಇದನ್ನು ನಮ್ಮ ಜನಪದರು 'ಕತ್ತಲರಾಜ್ಯ' ಎಂದು ಕರೆದಿದ್ದಾರೆ. ಇಲ್ಲಿ ಮಾದಯ್ಯ, ಮಂಟೇದರು ಜೋತಿಯಾಗಿ ಬೆಳಗಿದ್ದಾರೆ.

ಟಿಪ್ಪಣಿಗಳು

೧. ಡಾ.ಪಿ.ಕೆ. ರಾಜಶೇಖರ, ಮಲೆಮಾದೇಶ್ವರ ಕಾವ್ಯ, ಪುಟ ೧೨

೨. ಅದೇ, ಪುಟ ೧೦

೩. ಪ್ರೊ.ಎಸ್.ಎಸ್. ಹಿರೇಮಠ, ಮಲೆಮಾದಪ್ಪನ ಕಾವ್ಯ: ಸಾಂಸ್ಕೃತಿಕ ಮುಖಾಮುಖಿ, ಪುಟ ೯೨

೪. ಅದೇ, ಪುಟ ೯೮

೫. ಜಿ.ಶಂ. ಪರಮಶಿವಯ್ಯ, ದಕ್ಷಿಣ ಕರ್ನಾಟಕದ ಜನಪದ ಕಾವ್ಯಗಳು, ಪುಟ ೯೪

೬. ಡಾ.ಪಿ.ಕೆ. ರಾಜಶೇಖರ, ಮಲೆಮಾದೇಶ್ವರ ಕಾವ್ಯ, ಪುಟ ೧೦೩

೭. ಅದೇ, ಪುಟ ೪೪

೮. ಅದೇ, ಪುಟ ೬೬

೯. ಅದೇ, ಪುಟ ೧೨

೧೦. ಡಾ. ಬಂಜಗೆರೆ ಜಯಪ್ರಕಾಶ, ಮಲೆಮಾದಪ್ಪನ ಕಾವ್ಯ: ಸಾಂಸ್ಕೃತಿಕ ಮುಖಾಮುಖಿ, ಪುಟ ೪೨

೧೧. ಅದೇ, ಪುಟ ೩೨

೧೨. ಬಿ.ಎಸ್. ಸಣ್ಣಯ್ಯ, ದೇವಚಂದ್ರನ ರಾಜಾವಳಿ ಕಥಾಸಾರ, ಪುಟ ೧೯೮

೧೩. ಡಾ.ಪಿ.ಕೆ. ರಾಜಶೇಖರ, ಮಲೆಮಾದೇಶ್ವರ ಕಾವ್ಯ, ಪುಟ ೫೬೬

೧೪. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು, ಪುಟ ೧೦

೧೫. ಪ್ರೊ. ಬಿ. ಷೇಕ್‌ಅಲಿ, ಪ್ರೊ.ಅ. ಸುಂದರ, ಕರ್ನಾಟಕ ಚರಿತ್ರೆ ಸಂಪುಟ ೧, ಪುಟ ೨೯೨

೧೬. ಡಾ.ಪಿ.ಕೆ. ರಾಜಶೇಖರ, ಮಲೆಮಾದೇಶ್ವರ ಕಾವ್ಯ, ಪುಟ ೨೯

ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಹತ್ತಾರು ಕ್ಷೇತ್ರಗಳಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಕುರಿತು ಸಾಮಾನ್ಯ ಓದುಗರಿಗೆ ಅರಿವನ್ನು ನೀಡಲು ಮಂಟಪ ಮಾಲೆಯಲ್ಲಿ ಕಿರುಪುಸ್ತಕಗಳನ್ನು ಪ್ರಕಟಿಸುತ್ತಿದೆ.

"ಮಲೆಯಮಾದಯ್ಯನ ಸಾಂಸ್ಕೃತಿಕ ಚರಿತ್ರೆ" ಎಂಬ ಕಿರುಹೊತ್ತಿಗೆಯನ್ನು ಈ ಮಾಲೆಗಾಗಿ ಬರೆದುಕೊಟ್ಟಿರುವ ಮಹಾದೇವ ಶಂಕನಪುರ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

ಡಾ. ಎ. ಮುರಿಗೆಪ್ಪ
ಕುಲಪತಿ

ಮಂಟಪ ಮಾಲೆ - ೨೫೭